1 ಬಿಜಾಪುರ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲಾಗಿದೆಯೇ;

ಇಲ್ಲ

2 ಸದರಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ, ಹಾಗಿಲ್ಲದಿದ್ದಲ್ಲಿ, ಕಾರಣವೇನು (ವಿವರ ನೀಡುವುದು);

ಪರಿಶೀಲನೆಯಲ್ಲಿದೆ

3 ಸದರಿ ಜಿಲ್ಲೆಯನ್ನು ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)?

ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚನೆಯಾಗಿರುವ ರಾಜ್ಯಮಟ್ಟದ ಹವಾಮಾನ ಕಾವಲು ಸಮಿತಿ ಸಭೆಯಲ್ಲಿ ಪ್ರತಿವಾರ ಮುಂಗಾರು ಮಳೆಯ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿದೆ. ಮಳೆ–ಬೆಳೆ ಕೊರತೆ ಮುಂದುವರೆದಲ್ಲಿ ಬರಪೀಡಿತ ವೆಂದು ಘೋಷಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರ.ಸಂ.	:	**(167)161**
2. ಸದಸ್ಯರ ಹೆಸರು	:	**ಶ್ರೀ ಪ್ರತಾಪಗೌಡ ಪಾಟೀಲ್**
3. ಉತ್ತರಿಸುವ ಸಚಿವರು	:	**(ಶ್ರೀ ಗೋವಿಂದ ಎಂ.ಕಾರಜೋಳ್) ಮಾನ್ಯ ಸಣ್ಣ ನೀರಾವರಿ,ಯೋಜನೆ ಹಾಗೂ ಸಾಂಖ್ಯಿಕ ಸಚಿವರು.**

ಅ ಮಾನ್ವಿ ತಾಲ್ಲೂಕಿನ ಯಕ್ಕಾಲಪುರ ಗ್ರಾಮದ ಕೆರೆ ಶಿಥಿಲ ವ್ಯವಸ್ಥೆಯಲ್ಲಿದ್ದು, ಇದರ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮವೇನು;

ದಿನಾಂಕ 23/06/07ರಂದು ಆದ ಅತೀ ಮಳೆಯಿಂದ ಈ ಕೆರೆಯ ಏರಿ ಮತ್ತು ಕಾಲುವೆಗಳಿಗೆ ಹಾನಿಯುಂಟಾಗಿದೆ. ಸದರಿ ಕೆರೆಯ ದುರಸ್ತಿಗಾಗಿ ಜಿಲ್ಲಾಧಿಕಾರಿಗಳು, ರಾಯಚೂರು ಇವರು 22.00 ಲಕ್ಷ ರೂ.ಗಳ ಅನುದಾನ ಒದಗಿಸಿದ್ದು, ಇದರಲ್ಲಿ 4.50 ಲಕ್ಷ ರೂ.ಗಳ ಮೊತ್ತದ ರಿಂಗ್ ಬಂಡ್ ಕಾಮಗಾರಿಯನ್ನು ತುರ್ತಾಗಿ ಕೈಗೊಂಡು ಪೂರ್ಣಗೊಳಿಸಲಾಗಿದೆ, 15.60 ಲಕ್ಷ ರೂ.ಗಳ ಮೊತ್ತದ ಇನ್ನಿತರ ದುರಸ್ತಿ ಕಾಮಗಾರಿಗಳಿಗಾಗಿ ಟೆಂಡರ್ ಆಹ್ವಾನಿಸಿ ಗುತ್ತಿಗೆಯನ್ನು ಜೂನ್ 2008ರಲ್ಲಿ ವಹಿಸಿಕೊಡಲಾಗಿದ್ದು, ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	(168)162
2) ಸದಸ್ಯರ ಹೆಸರು	:	ಶ್ರೀ.ಪ್ರತಾಪ್ ಗೌಡ ಪಾಟೀಲ್ (ಮಸ್ಕಿ)
3) ಉತ್ತರಿಸುವ ಸಚಿವರು	:	(ಶ್ರೀ ಬಸವರಾಜ್ ಬೊಮ್ಮಾಯಿ)